11.30 ಗಂಟೆಗೆ ಹೋಗಿ ನೋಡಿದ್ದೇನೆ. ಅದು 127 ವರ್ಷಗಳ ಹಿಂದೆ ಕಟ್ಟಿರತಕ್ಕ ಕಟ್ಟಡ ಅದು. ಹೆಂಚಿನ ಒಳಗಡೆ ತಾರಸಿಯಿದೆ. ಬೆಂಕಿ ಹತ್ತಿಕೊಂಡಮೇಲೆ ಅದರ ಹಬೆಗೆ ಪೂರ್ತಿ ಬಿದ್ದಿದೆ. ಕೆಲವು ಕಾಗದಪತ್ರಗಳು ಅರ್ಧಬರ್ಧ ಸುಟ್ಟಿವೆ. ಕೆಲವು ಅರ್ಧಂಬರ್ಧ ಇವೆ. ಎಲ್ಲಾ ಹಾಗೆಯೇ ಬಿದ್ದಿವೆ ಅದನ್ನು ಆರಿಸುವುದಕ್ಕೆ ಪ್ರಯತ್ನಪಟ್ಟಿಲ್ಲ. ನಾನು ಅಲ್ಲಿಗೆ ಹೋಗಿ ನೋಡಿದಾಗ ಇನ್ನೂ ಹೊಗೆ ಬರುತ್ತಿತ್ತು. ಇಡೀ ರಾತ್ರಿ ಬೆಂಕಿಯನ್ನು ಆರಿಸಿದರೂ ಕೂಡ ಆರಿಲ್ಲ. ಅಲ್ಲಿನ ಅಧಿಕಾರಿಗಳು ಹೆಚ್ಚು ಆಸಕ್ತಿ ವಹಿಸಿ ಕೆಲಸ ಮಾಡಿರುವುದನ್ನು ನಾನೇ ನೋಡಿದ್ದೇನೆ. ಎಲ್ಲಾ ರೀತಿಯಲ್ಲಿ ಕಾನೂನು ಪ್ರಕಾರ ಪೊಲೀಸ್ ಇಲಾಖೆಯ ಎಂ.ಎನ್. ರೆಡ್ಡಿಯವರನ್ನು ಕರೆಸಿ ಅವರೂ ಕೂಡ ಸ್ಥಳದಲ್ಲಿದ್ದು ಸುಮಾರು 5.30 ಗಂಟೆಯವರೆಗೆ ಅವರು ವೀಕ್ಷಣೆ ಮಾಡಿದ್ದಾರೆ. ಎಲ್ಲಾ ಅಧಿಕಾರಿಗಳು ಸಂಬಂಧಪಟ್ಟ ಇಲಾಖೆಯವರು ಹೋಗಿದ್ದಾರೆ. ಎಲ್ಲರೂ ಬೆಂಕಿಯನ್ನು ಆರಿಸುವಂತಹ ಪ್ರಯತ್ನ ಮಾಡಿದ್ದಾರೆ. ಪ್ರತಿಯೊಬ್ಬರೂ ಖುದ್ದಾಗಿ ಅಲ್ಲಿದ್ದು ವೀಕ್ಷಣೆ ಮಾಡಿದ್ದಾರೆ.

ಶ್ರೀ ವಾಟಾಳ್ ನಾಗರಾಜ್: ಮಾನ್ಯ ಮಂತ್ರಿಗಳು ಉತ್ತರ ಕೊಡುವಾಗ ಅಲ್ಲಿ ಪವಿತ್ರವಾದ ಕಡತಗಳು ಇರಲಿಲ್ಲವೆಂದರು. ಪವಿತ್ರವಾದ ಕಡತಗಳು ಯಾವುವು? ಅಪವಿತ್ರವಾದ ಕಡತಗಳು ಯಾವುವು? ಅಪವಿತ್ರವಾದ ಕಡತಗಳು ಯಾವುವು ಇದು ಎಲ್ಲಿಯಾದರೂ ಉಂಟಾ? ಪತ್ರಿಕಾಕರ್ತರನ್ನು ಒಳಗಡೆ ಬಿಡುವುದಿಲ್ಲ. ಬೆಂಕಿ ಬಿದ್ದಿರುವ ಜಾಗವನ್ನು ಇವರು ತೋರಿಸುವುದಿಲ್ಲ. ಇದು ಬಹಳ ಪ್ರಾಮುಖ್ಯವಾದುದು. ಇಷ್ಟು ಲಘುವಾಗಿ ಮಾನ್ಯ ಸಚಿವರು ಉತ್ತರ ಕೊಡುವುದು ಇದು ಅಷ್ಟು ಸುಲಭವಲ್ಲ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ : ಒಂದೇ ಒಂದು ಕ್ಲಾರಿಫಿಕೇಷನ್.

ಅಧ್ಯಕ್ಷರು : ನೀವು ಮಾಡಲ್ ಆಗಿರಬೇಕು ಹಿಂದಿನವರಿಗೆ. ನೀವು ಮಾಡಲ್ ಆಗಬೇಕೆಂದು ಹೇಳಿದ್ದೇನೆ. ಬೆಂಕಿ ಬಿದ್ದರೂ ಮಾಡಲ್ ಬಾಂಬ್ ಬಿದ್ದರೂ ಮಾಡಲ್.

ಎ) ಯಗಚಿ ಅಣೆಕಟ್ಟಿನ ಕಾಮಗಾರಿ ಬಗ್ಗೆ.

ಹೆಚ್.ಎಸ್. ಪ್ರಕಾಶ್(ಹಾಸನ) : ಮಾನ್ಯ ಅಧ್ಯಕ್ಷರೆ, ಹೇಮಾವತಿ ಅಣೆಕಟ್ಟನ್ನು ಹಾಸನ ಜಿಲ್ಲೆಯಲ್ಲಿ ಕಟ್ಟಿದ್ದಾರೆ. ಹಾಸನ ಜಿಲ್ಲೆಗೆ ಸಂಬಂಧಪಟ್ಟ ಬಹುತೇಕ ಭಾಗ ಮುಳುಗಡೆಯಾಗಿದೆ. ಯಗಚಿ ಅಣೆಕಟ್ಟು ಬೇಲೂರು ತಾಲ್ಲೂಕಿನಲ್ಲಿ ಕಟ್ಟಲಾಗುತ್ತಿದೆ. ಇದರ ಕೆಲಸ ಬಹಳ ನಿಧಾನವಾಗಿ ನಡೆಯುತ್ತಿದೆ. ಆದರೆ ನಮಗೆ ಹೇಮಾವತಿ ಅಣೆಕಟ್ಟಿನಿಂದ ಬರತಕ್ಕ ಅಚ್ಚುಕಟ್ಟು 800 ಎಕರೆ. ಯಗಚಿ ಅಣೆಕಟ್ಟು

50 ಕಿಲೋಮೀಟರ್ ನಾಲೆಯನ್ನು ತೆಗೆದು ಆಗಿದೆ. ಡಿಸ್ಟ್ರಿಬ್ಯೂಟರಿ ಕೆನಾಲ್ ತೆಗೆಯಬೇಕಾಗಿದೆ. ಇದರಿಂದ 30-40 ಸಾವಿರ ಎಕರೆ ನೀರಾವರಿಯಾಗುವ ನಂದರ್ಭವಿದೆ. ಕಾಮಗಾರಿಗಳು ಇನ್ನೂ ಬಾಕಿಯಿವೆ. ಈ ವರ್ಷದ ಬಜೆಟ್‌ನಲ್ಲಿ 50 ಕೋಟಿ ಹಣವನ್ನು ಕೊಟ್ಟಿದ್ದಾರೆ. ಇದರಲ್ಲಿ ಸಾರಿಗೆ ಮತ್ತು ಕೌಕರರ ಸಂಬಳಕ್ಕೆ ಹೋದರೆ ಯಾವುದೇ ಯೋಜನೆಯನ್ನು ತ್ವರಿತಗತಿಯಲ್ಲಿ ಮುಗಿಸುವುದಕ್ಕೆ ಆಗುವುದಿಲ್ಲ. ಮಾನ್ಯ ಹಣಕಾಸಿನ ಸಚಿವರು ಹೆಚ್ಚಿನ ಗಮನವನ್ನು ಕೊಡಬೇಕಾಗುತ್ತದೆ. ಹೆಚ್ಚಿನ ರೀತಿಯಲ್ಲಿ ಕೆಲಸವನ್ನು ಮಾಡಲಿಕ್ಕೆ ಹೆಚ್ಚಿನ ಹಣವನ್ನು ಬಿಡುಗಡೆ ಮಾಡಬೇಕೆಂದು ಕೋರುತ್ತೇನೆ. ಇದರ ಬಗ್ಗೆ ವಿಶೇಷವಾದ ಕಾಳಜಿಯನ್ನು ವಹಿಸಬೇಕೆಂದು ಮನವಿ ಮಾಡುತ್ತೇನೆ.

4.20 ಪಿ.ಎಂ

ಶ್ರೀ ಕೆ.ಎನ್. ನಾಗೇಗೌಡ (ಭಾರಿ ನೀರಾವರಿ ಸಚಿವರು): ಸನ್ಮಾನ್ಯ ಅಧ್ಯಕ್ಷರೇ, ಯಗಚಿ ಯೋಜನೆ 35 ಕೋಟಿಯಿಂದ ಪ್ರಾರಂಭವಾಗಿ 240 ಕೋಟಿಯ ರಿವೈಸ್ಡ್ ಎಸ್ಟಿಮೇಟ್ ಬಂದಿದೆ. 96 ಕೋಟಿ ಖರ್ಚು ಮಾಡಿದ್ದೇವೆ. ಎಲ್ಲು ವರ್ಷದಲ್ಲಿ 60 ಕೋಟಿ ಖರ್ಚು ಮಾಡಿದ್ದೇವೆ. ಅವರು ಇನ್ನೂ ಕೆಚ್ಚು ಹಣ ಕೊಡಬೇಕೆಂದು ಹೇಳುತ್ತಿದ್ದಾರೆ. ಡ್ಯಾಮ್ ಫೋರ್ಷನ್‌ನಲ್ಲಿ ಕೆಚ್ಚುಕಡಿಮೆ ಎಲ್ಲಾ ಮುಗಿಯುತ್ತಿದೆ. ಸ್ಪಿಲ್‌ವೇಗಳು ಆಗುತ್ತಾ ಇವೆ, ಕೆನಾಲ್ ಆಗುತ್ತಾ ಇದೆ. ಆದಷ್ಟು ಮಾಡಿ ಇನ್ನು ಮೂರು ವರ್ಷದಲ್ಲಿ ಉಳಿದಿರತಕ್ಕಂಥ ಹಣ ಖರ್ಚು ಮಾಡಿ ಈಗಾಗಲೇ ಹಣಕಾಸು ಮಂತ್ರಿ ಮತ್ತು ಉಪಮುಖ್ಯಮಂತ್ರಿಗಳಿಗೆ ಕಾವೇರಿ ಬೇಸಿನ್‌ನಲ್ಲಿರತಕ್ಕಂಥ ಎಲ್ಲಾ ಶಾಸಕರ ಸಭೆಯನ್ನು ಕರೆಯಬೇಕೆಂದು ಕೇಳಿದ್ದೇವೆ. ಇದರ ಬಗ್ಗೆ ಸದನದಲ್ಲಿ ನಿನ್ನೆ ವಿಶ್ವಾಸನೆಯನ್ನು ಕೊಟ್ಟಿದ್ದಾರೆ. ಸಭೆ ಕರೆದು ಹಣ ಒದಗಿಸಿ ಇನ್ನು ಮೂರು ವರ್ಷದಲ್ಲಿ 53 ಸಾವಿರವರೆಗೂ ನೀರು ಕೊಡೋಣ.

ಅಧ್ಯಕ್ಷರು : ಪುಟ್ಟೇಗೌಡರು ಏನೋ ಹೇಳುತ್ತಾರಂತೆ.

ಶ್ರೀ ಸಿ.ಎಸ್. ಪುಟ್ಟೇಗೌಡ (ಚನ್ನರಾಯಪಟ್ಟಣ): ಮಾನ್ಯ ಅಧ್ಯಕ್ಷರೇ, ಈ ನಂದರ್ಭದಲ್ಲಿ ಮಾನ್ಯ ಸಚಿವರಾದ ಶ್ರೀ ನಾಗೇಗೌಡರಿಗೆ ಹೇಳುವುದೇನೆಂದರೆ, ಅಲ್ಲಿ ನೆಮಠ ಕಳೆದುಕೊಂಡಂಥವರು, ನೀರಾವರಿ ಮಾಡಲಾಗಿ ಪುನರ್‌ವಸತಿ ರ್ಯಕ್ರಮಗಳಿಗೆ ಇನ್ನೂ ದುಡ್ಡನ್ನು ನೀವು ಕೊಟ್ಟಿಲ್ಲ. ಬಹಳ ವರ್ಷದಿಂದ ಗೆಯೇ ಉಳಿದುಕೊಂಡು ಬಂದಿದೆ. ಜಮೀನು ಕಳೆದುಕೊಂಡಿರತಕ್ಕಂಥವರು, ನೆಗಳನ್ನು ಕಳೆದುಕೊಂಡಿರತಕ್ಕಂಥವರು ಇದ್ದಾರೆ. ಮತ್ತೆ ಏನು 320 ಕೋಟಿ ರೂ. ಣ ಕೊಟ್ಟು ಮೂರು ವಲಯಗಳನ್ನು ಮಾಡಿದ್ದು, ನಮ್ಮ ವಲಯಕ್ಕೆ ತುಂಬಾ ಕಡಿಮೆ

ಮಾಡಿದ್ದೀರಿ. ಕೇವಲ 55 ಕೋಟಿ ಎಂದು ಮಾಡಿದ್ದೀರಿ. ನಿಮ್ಮ ಎಸ್ಟಾಬ್ಲಿಷ್‌ಮೆಂಟ್ ಚಾರ್ಜಸ್ ಎಷ್ಟು ಬರುತ್ತದೆ? ನೀವು ಕೆಲಸ ಮಾಡುವುದಕ್ಕೆ ಎಷ್ಟು ಸಾಧ್ಯ ಮತ್ತು ಅಲ್ಲಿರತಕ್ಕಂಥ ಲಿಫ್ಟ್ ಇರಿಗೇಷನ್ ಎಲ್ಲಾ ಹಾಗೆಹಾಗೆಯೇ ನಿಂತಿದೆ. ಪೆಂಡಿಂಗ್ ಬಿಲ್ ಕ್ಲಿಯರ್ ಮಾಡುವುದಕ್ಕೆ ಈ ದುಡ್ಡು ಸಾಕಾಗುತ್ತದೆ. ದಯಮಾಡಿ ಈ ರೀತಿ ಆಗಕೂಡದು. ಹೆಚ್ಚಿಗೆ ಹಣ ಮಂಜೂರು ಮಾಡಬೇಕು. ದಯಮಾಡಿ ನೀವು ಆ ಭಾಗದ ಬಗ್ಗೆ ಆಸಕ್ತಿ ವಹಿಸದೇ ಇದ್ದರೆ, ನೀವು ಕೊಟ್ಟಿರುವ ದುಡ್ಡಿನಲ್ಲಿ ಪೆಂಡಿಂಗ್ ಬಿಲ್ಸ್ ಕೊಟ್ಟರೆ ಈ ವರ್ಷ ಏನೂ ಕೆಲಸ ಮಾಡುವುದಕ್ಕೆ ಆಗುವುದಿಲ್ಲ. ಹಾಗಾದರೆ ಈ ಡಿವಿಜನನ್ನು ಏಕೆ ಇಟ್ಟುಕೊಳ್ಳಬೇಕು? ಸರಿಯಾದ ಕ್ರಮ ತೆಗೆದುಕೊಳ್ಳಲಿಲ್ಲ ಎಂದರೆ ಇಷ್ಟು ಎಶ್ಟಾಬ್ಲಿಷ್‌ಮೆಂಟ್ ಚಾರ್ಜಸ್ ಖರ್ಚುಮಾಡಿ ಅದನ್ನು ಇಟ್ಟುಕೊಳ್ಳತಕ್ಕಂಥಾದ್ದು ಅನಾವಶ್ಯಕ ಎಂಬ ಮಾತನ್ನು ಹೇಳುತ್ತಾ ಮಾನ್ಯ ಅರ್ಥ ಸಚಿವರಾದ ಸಿದ್ಧರಾಮಯ್ಯನವರು ಇದರ ಕಡೆಗೆ ಗಮನಿಸಬೇಕು. ಈ ಭಾಗದ ಜನರು ಹಾಳಾಗಿ ಹೋಗಿದ್ದಾರೆ. ಕಟ್ಟೆ ಕಟ್ಟಲಿಕ್ಕೆ ಜಾಗ ಕೊಟ್ಟು ಎಲ್ಲಾ ಕಳೆದುಕೊಂಡಿದ್ದಾರೆ. ಪುನರ್‌ವಸತಿಯ ನೀರಾವರಿಯ ಸೀಪೇಜ್ ವಾಟರ್ ಬಂದು ಎಲ್ಲಾ ಕಳೆದುಕೊಂಡವರೂ ಇದ್ದಾರೆ. ದಯಮಾಡಿ ಅವರಿಗೆ ಸಹಾಯ ಮಾಡಬೇಕು. ಅದಕ್ಕೆ ಕ್ರಮ ತೆಗೆದುಕೊಳ್ಳಬೇಕು.

ಶ್ರೀ ಕೆ.ಎನ್.ನಾಗೇಗೌಡ (ಭಾರಿ ನೀರಾವರಿ ಸಚಿವರು): ಈಗ ಐದು ಹಳ್ಳಿಗಳು ಅವೇನು ರಿಸರ್ವಾಯರ್‌ನಲ್ಲಿ ಮುಳುಗಡೆಯಾಗತಕ್ಕಂಥಾದ್ದು ಇವೆ, ಅವರಿಗೆ ಪರಿಹಾರ ಕೊಟ್ಟಿದ್ದೇವೆ. ಎಂಟು ರಿಹ್ಯಾಬಿಲಿಟೇಷನ್ ಸೆಂಟರ್‌ಗಳನ್ನು ಪ್ರಾರಂಭ ಮಾಡಿದ್ದೇವೆ, ಎಂಟು ಮಿನಿ ಸೆಂಟರ್‌ಗಳಿಗೆ ವ್ಯವಸ್ಥೆ ಮಾಡಿದ್ದೇವೆ. ಇನ್ನೂ ಯಾರಿಗೆ ಪರಿಹಾರ ಕೊಟ್ಟಿಲ್ಲ, ಅವರಿಗೆ ಪರಿಹಾರ ಕೊಡುತ್ತೇವೆ. ನಿಜ, ಹಣ ಇಲ್ಲ. ಕಾವೇರಿ ಬೇಸಿನ್ ಮುಗಿಸಬೇಕಾದರೆ 1900 ಕೋಟಿ ಬೇಕು. ಈಗ ಕೊಟ್ಟಿರತಕ್ಕಂಥಾದ್ದು 330 ಕೋಟಿ. ಅದಕ್ಕೇ ನಾನು ಮೂರು ವರ್ಷದಲ್ಲಿ ಕಾವೇರಿ ಬೇಸಿನ್‌ನಲ್ಲಿ ಬರತಕ್ಕಂಥ ಎಲ್ಲಾ ಕೆಲಸ ಮುಗಿಸಬೇಕಾದರೆ ಜಾಸ್ತಿ ಹಣ ಬೇಕು ಎಂದು ಕೇಳಿದ್ದೇನೆ. ಆ ಭಾಗದ ಶಾಸಕರ ಸಭೆಯನ್ನು ಕೂಡಲೇ ಕರೆದು ನಮ್ಮ ಹಣಕಾಸಿನ ಮಂತ್ರಿಗಳಿಂದ ಹೆಚ್ಚು ಹಣ ಪಡೆದು ಕೆಲಸ ಮಾಡುತ್ತೇವೆ.

ಶ್ರೀ ಸಿ.ಆರ್.ಸಗೀರ್ ಅಹಮದ್: ಮಾನ್ಯ ಅಧ್ಯಕ್ಷರೇ....

ಅಧ್ಯಕ್ಷರು: ಸಗೀರ್ ಅಹಮದ್, ನೀವು ನೋಟೀಸ್ ಕೊಟ್ಟಿದ್ದೀರಾ?

ಶ್ರೀ ಸಿ.ಆರ್.ಸಗೀರ್ ಅಹಮದ್: ಹೌದು. ತಮ್ಮ ಕೊಠಡಿಯಲ್ಲಿ ಬಂದು ಮಾತನಾಡಿದ್ದೇನೆ.

ಅಧ್ಯಕ್ಷರು: ಮಾತನಾಡಿದಿರಿ. ನೋಟೀಸ್ ಇದ್ದರೆ ಮಂತ್ರಿಗಳಿಗೆ ಹೋಗಿರುತ್ತದೆ.

ಅವರು ರಿಪ್ಲೈ ಕೊಡುತ್ತಾರೆ.

ಶ್ರೀ ಸಿ.ಆರ್.ಸಗೀರ್ ಅಹಮದ್: ಇವತ್ತು ಅವರೂ ಓದಿರುತ್ತಾರೆ.

ಅಧ್ಯಕ್ಷರು: ಪ್ರಸ್ತಾಪ ಮಾಡಿ.

ಏ) ಅರಣ ಇಲಾಖೆಯಲ್ಲಿ ಒತ್ತುವರಿ ಆಗಿರತಕ್ಕಂಥ ಭೂಮಿ.

ಶ್ರೀ ಸಿ.ಆರ್.ಸಗೀರ್ ಅಹಮದ್: ಸನ್ಮಾನ್ಯ ಅಧ್ಯಕ್ಷರೇ, ಈ ಅರಣ್ಯ ಇಲಾಖೆಯಲ್ಲಿ ಒತ್ತುವರಿ ಆಗಿರತಕ್ಕಂಥ ಭೂಮಿ ಬಗ್ಗೆ ನಾನು ಪ್ರಶ್ನೆ ಹಾಕಿದ್ದೆ. 20ನೇ ತಾರೀಕು ಲಿಖಿತ ಮೂಲಕ ಉತ್ತರಗಳ ಪ್ರಶ್ನೆ ಪಟ್ಟಿ 14ರಲ್ಲಿ ಈ ಪ್ರಶ್ನೆ ಪ್ರಕಟವಾಗಿದೆ. ಆದರೆ ಉತ್ತರ ಇಲ್ಲಿಯವರೆಗೆ ನನಗೆ ಬರಲಿಲ್ಲ. ಆದರೆ ಮಾಹಿತಿ ಕೇಳಿದಂಥ ಒಬ್ಬ ಜವಾಬ್ದಾರಿಯುತ ಶಾಸಕನ ಹಕ್ಕಿಗೆ ಸಂಬಂಧಪಟ್ಟ ವಿಚಾರ ಇದಾಗಿದ್ದು, ಆ ಶಾಸಕನ ಗಮನಕ್ಕೆ ಬಾರದೇ ಇರುವಂಥ ವಿಚಾರಗಳು ಪತ್ರಿಕೆಯಲ್ಲಿ ಬರುತ್ತವೆ ಎಂದು ಹೇಳಿದರೆ ನಾನು ಶಾಸಕನಾಗಿ ಈ ಸದನದಲ್ಲಿ ಇರಬೇಕೇ ಎನ್ನುವ ಒಂದೇ ಪ್ರಶ್ನೆಯನ್ನು ತಮ್ಮ ಮೂಲಕ ನಾನು ಸರ್ಕಾರಕ್ಕೆ ಹಾಕುತ್ತಿದ್ದೇನೆ. ಆದ್ದರಿಂದ ದಯಮಾಡಿ ತಾವು ನನ್ನ ಬಗ್ಗೆ ಸಹಾನುಭೂತಿಯಿಂದ ನ್ಯಾಯವನ್ನು ಒದಗಿಸಿಕೊಡಬೇಕಾಗಿ ಕೋರುತ್ತಿದ್ದೇನೆ.

ಅಧ್ಯಕ್ಷರು: ಅನ್‌ಸ್ಟಾರ್ಡ್ ಪ್ರಶ್ನೇನಾ ಅದು?

ಶ್ರೀ ಸಿ.ಆರ್.ಸಗೀರ್ ಅಹಮದ್: ಅನ್‌ಸ್ಟಾರ್ಡ್ ಮಾಡಿದ್ದಾರೆ. ಆದರೆ ಉತ್ತರ ಬರಲಿಲ್ಲ. ಇವತ್ತು ಪತ್ರಿಕೆಗಳಲ್ಲಿ ಪ್ರಕಟವಾಗಿದೆ. ಇಂಡಿಯನ್ ಎಕ್ಸ್‌ಪ್ರೆಸ್‌ನಲ್ಲಿ ಅಕ್ರಮವಾಗಿ ಎಷ್ಟು ಜಮೀನು ಒತ್ತುವರಿಯಾಗಿದೆ, ಯಾವ್ಯಾವ ರಾಜಕಾರಣಿಗಳು ಇದನ್ನು ಮಾಡಿದ್ದಾರೆ, ಎಷ್ಟೆಷ್ಟು ಎಕರೆಯಾಗಿದೆ, ಸರ್ಕಾರಕ್ಕೆ ಎಷ್ಟು ಕೋಟಿ ರೂಪಾಯಿಗಳ ಲುಕ್ಸಾನು ಆಗಿದೆ ಎನ್ನುವುದರ ಬಗ್ಗೆ ಪತ್ರಿಕೆಗಳಲ್ಲಿ ಪ್ರಕಟವಾಗಿದೆ. ಹಾಗಾದರೆ ನಾನು ಸರ್ಕಾರದಲ್ಲಿ ಪ್ರಶ್ನೆ ಹಾಕುವಂಥಾದ್ದು ತಪ್ಪಾ? ನನಗೆ ಬರದೇ ಇರುವಂಥ ಉತ್ತರ ಪತ್ರಿಕೆಗಳಿಗೆ ಹೇಗೆ ಹೋಯಿತು ಎನ್ನುವಂಥಾದ್ದು ನನ್ನ ಪ್ರಶ್ನೆ. ದಯಮಾಡಿ ನನಗೆ ನ್ಯಾಯವನ್ನು ಒದಗಿಸಿಕೊಡಬೇಕಾಗಿ ತಮ್ಮನ್ನು ನಾನು ಕೋರುತ್ತಿದ್ದೇನೆ.

ಶ್ರೀ ಡಿ.ಮಂಜುನಾಥ್ (ಅರಣ್ಯಮಂತ್ರಿ): ಮಾನ್ಯ ಅಧ್ಯಕ್ಷರೇ, ಅದು ಅನ್‌ಸ್ಟಾರ್ಡ್ ಪ್ರಶ್ನೆಯಾಗಿದ್ದು ಅದಕ್ಕೆ ಉತ್ತರ ಬಂದಿಲ್ಲವೆಂದು ಹೇಳುತ್ತಿದ್ದಾರೆ. ಬಹಶ್ಃ ಇದು ನನ್ನ ಗಮನಕ್ಕೆ ಬಂದಿಲ್ಲ.....

ಅಧ್ಯಕ್ಷರು: ಸನ್ಮಾನ್ಯ ಮಂಜುನಾಥ್‌ರವರೇ, ಅವರ ಸಮಸ್ಯೆ ಏನು ಎಂದರೆ, ನಾನು ಪ್ರಶ್ನೆಯನ್ನು ಕಳುಹಿಸಿದ್ದು, ಅದನ್ನು ಅನ್‌ಸ್ಟಾರ್ಡ್ ಎಂದು ಟ್ರೀಟ್ ಮಾಡಿದ್ದಾರೆ.